Akashvani: Bangalore
National Bulletin In Kannada
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

12.09.2025 : 7.35 hrs

ಮುಖ್ಯಾಂಶಗಳು

೧. ಭಾರತದ ನೂತನ ಉಪರಾಷ್ಟ್ರಪತಿಯಾಗಿ ಇಂದು ಸಿ.ಪಿ. ರಾಧಾಕೃಷ್ಣನ್ ಪ್ರಮಾಣವಚನ ಸ್ವೀಕಾರ

೨. ನವದೆಹಲಿಯಲ್ಲಿಂದು ಜ್ಞಾನ ಭಾರತಂ ಪೋರ್ಟಲ್‌ಗೆ ಚಾಲನೆ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ

೩. ಹರಿಯಾಣದ ಗುರುಗ್ರಾಮದಲ್ಲಿಂದು ಐಎನ್‌ಎಸ್ ಅರಾವಲಿ ಅಧಿಕೃತ ಕಾರ್ಯಾರಂಭ; ಭಾರತದ ಕಡಲ ಭದ್ರತೆಗೆ ನವಚೈತನ್ಯ

೪. ಪ್ರವಾಹ ಪೀಡಿತ ಉತ್ತರಾಖಂಡಕ್ಕೆ ೧ ಸಾವಿರದ ೨೦೦ ಕೋಟಿ ರೂಪಾಯಿಗಳ ಆರ್ಥಿಕ ಸಹಾಯ ಘೋಷಿಸಿದ ಪ್ರಧಾನಿ

>><><><><><><><<

ನೂತನ ಉಪರಾ?ಪತಿಯಾಗಿ ಸಿ.ಪಿ. ರಾಧಾಕೃ?ನ್ ಅವರು ಇಂದು ರಾ?ಪತಿ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ, ರಾ?ಪತಿ ದ್ರೌಪದಿ ಮುರ್ಮು ಅವರು ಬೆಳಿಗ್ಗೆ ೧೦:೩೦ ಕ್ಕೆ ಪ್ರಮಾಣ ವಚನ ಬೋಧಿಸಲಿದ್ದಾರೆ. ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಸಂಸತ್ತಿನ ಉಭಯ ಸದನಗಳ ಆಡಳಿತಾರೂಢ ಎನ್‌ಡಿಎಯ ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರಿಗೆ ಆಹ್ವಾನ ನೀಡಲಾಗಿದೆ. ಮಾಜಿ ಉಪರಾ?ಪತಿ ಜಗದೀಪ್ ಧನ್‌ಕರ್ ಕೂಡ ಸಮಾರಂಭದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಸಿ.ಪಿ.ರಾಧಾಕೃ?ನ್ ನಿನ್ನೆ ಮಹಾರಾ? ರಾಜ್ಯಪಾಲ ಹುದ್ದೆಗೆ ಔಪಚಾರಿಕವಾಗಿ ರಾಜೀನಾಮೆ ನೀಡಿದರು. ಅವರ ರಾಜೀನಾಮೆಯ ನಂತರ, ರಾ?ಪತಿ ದ್ರೌಪದಿ ಮುರ್ಮು ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ್ ಅವರನ್ನು ಮಹಾರಾ?

ರಾಜ್ಯಪಾಲರಾಗಿ ಹೆಚ್ಚುವರಿ ಜವಾಬ್ದಾರಿ ವಹಿಸಿದ್ದಾರೆ ಎಂದು ರಾ?ಪತಿ ಭವನದ ಅಧಿಕೃತ ಹೇಳಿಕೆ ದೃಢಪಡಿಸಿದೆ.

>><><><><><><><<

ಪ್ರಧಾನಿ ನರೇಂದ್ರ ಮೋದಿಯವರು ಇಂದು ಸಂಜೆ ನವದೆಹಲಿಯಲ್ಲಿ ನಡೆಯುತ್ತಿರುವ "ಜ್ಞಾನ ಭಾರತಂ" ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು ಜ್ಞಾನ ಭಾರತಂ ಪೋರ್ಟಲ್ ಅನ್ನು ಬಿಡುಗಡೆ ಮಾಡಲಿದ್ದಾರೆ. ಇದು ಹಸ್ತಪ್ರತಿಗಳ ಡಿಜಿಟಲೀಕರಣ, ಸಂರಕ್ಷಣೆ ಹಾಗೂ ಸಾರ್ವಜನಿಕ ಪ್ರವೇಶವನ್ನು ಸುಗಮಗೊಳಿಸಲು ಮೀಸಲಾಗಿರುವ ಡಿಜಿಟಲ್ ವೇದಿಕೆಯಾಗಿದೆ. ಮೂರು ದಿನಗಳ ಈ ಸಮ್ಮೇಳನವು ನಿನ್ನೆ “ಹಸ್ತಪ್ರತಿಗಳ ಪರಂಪರೆ ಮೂಲಕ ಭಾರತದ ಜ್ಞಾನ ಪರಂಪರೆಯ ಪುನಃಶ್ಚೇತನ” ಎಂಬ ಧ್ಯೇಯವಾಕ್ಯದೊಂದಿಗೆ ಆರಂಭವಾಗಿದೆ. ದೇಶ-ವಿದೇಶಗಳಿಂದ ಬಂದಿರುವ ತಜ್ಞರು, ತಂತ್ರಜ್ಞರು ಹಾಗೂ ನೀತಿನಿರೂಪಕರು ಈ ಸಮ್ಮೇಳನದಲ್ಲಿ ಭಾಗವಹಿಸಿ, ಭಾರತದ ಅಪೂರ್ವ ಹಸ್ತಪ್ರತಿಗಳ ಸಂಪತ್ತನ್ನು ಪುನರುಜ್ಜೀವನಗೊಳಿಸಲು ಮತ್ತು ಅದನ್ನು ಜಾಗತಿಕ ಜ್ಞಾನ ಸಂವಾದದ ಕೇಂದ್ರಬಿಂದುವಾಗಿಸಲು ಮಾರ್ಗಗಳ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ಸಮ್ಮೇಳನದ ಭಾಗವಾಗಿ ಅಪರೂಪದ ಹಸ್ತಪ್ರತಿಗಳ ಪ್ರದರ್ಶನ, ಹಾಗೂ ಹಸ್ತಪ್ರತಿಗಳ ಸಂರಕ್ಷಣೆ, ಡಿಜಿಟಲೀಕರಣ ತಂತ್ರಜ್ಞಾನಗಳು, ಮೆಟಾದತ್ತಾಂಶ ಮಾನದಂಡಗಳು, ಕಾನೂನು ಜಾಲಗಳು, ಸಾಂಸ್ಕೃತಿಕ ರಾಜತಂತ್ರ ಮತ್ತು ಪುರಾತನ ಲಿಪಿಗಳ ವ್ಯಾಖ್ಯಾನ ಕುರಿತು ತಜ್ಞರಿಂದ ಸಂಶೋಧನಾತ್ಮಕ ಪದರ್ಶನಗಳು ನಡೆಯಲಿವೆ.

>><><><><><><><<

ಭಾರತದ ಕಡಲ ಭದ್ರತೆಗೆ ಹೊಸ ಚೈತನ್ಯ ನೀಡುವ ನಿಟ್ಟಿನಲ್ಲಿ, ಭಾರತೀಯ ನೌಕಾಪಡೆ ಐಎನ್‌ಎಸ್ ಅರಾವಲಿ ಯನ್ನು ಇಂದು ಹರಿಯಣದ ಗುರುಗ್ರಾಮದಲ್ಲಿ ಅಧಿಕೃತವಾಗಿ ಕಾರ್ಯಾರಂಭಗೊಳಿಸಲಿದೆ. ಅರಾವಲಿ ನೌಕಾಪಡೆಯ ಮಾಹಿತಿ ಹಾಗೂ ಸಂವಹನ ಮೂಲವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶ ಹೊಂದಿದೆ. ಐಎನ್‌ಎಸ್ ಅರಾವಲಿ, ನೌಕಾಪಡೆಯ ಕಮಾಂಡ್, ಕಂಟ್ರೋಲ್ ಮತ್ತು ಮೆರಿಟೈಮ್ ಡೊಮೇನ್ ಎವೆರ್‌ನೆಸ್ ಒಆಂ ಆಧಾರವಾದ ಮಾಹಿತಿ ಮತ್ತು ಸಂವಹನ ಕೇಂದ್ರಗಳನ್ನು ಬೆಂಬಲಿಸುವ ಪ್ರಮುಖ ನೆಲೆ ಆಗಲಿದೆ ಎಂದು ರಕ್ಷಣಾ

ಸಚಿವಾಲಯ ತಿಳಿಸಿದೆ,

ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಈ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

>><><><><><><<

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಡೆಹ್ರಾಡೂನ್‌ನಲ್ಲಿ ಸಂಭವಿಸಿದ ಮೇಘಸ್ಫೋಟ, ಮಳೆ ಮತ್ತು ಭೂಕುಸಿತಗಳಿಂದ ಉಂಟಾದ ಪ್ರವಾಹ ಪರಿಸ್ಥಿತಿ ಮತ್ತು ಹಾನಿಯನ್ನು ಪರಿಶೀಲಿಸಿದ್ದು, ಉತ್ತರಾಖಂಡಕ್ಕೆ ೧ ಸಾವಿರದ ೨೦೦ ಕೋಟಿ ರೂಪಾಯಿಗಳ ಆರ್ಥಿಕ ಸಹಾಯವನ್ನು ಘೋಷಿಸಿದರು. ಉತ್ತರಾಖಂಡ ಮತ್ತು ಅಲ್ಲಿನ ಜನರು ಚೇತರಿಸಿಕೊಳ್ಳಲು ಸಹಾಯ ಮಾಡಲು ಬಹು ಆಯಾಮದ ವಿಧಾನದ ಅಗತ್ಯವನ್ನು ಪ್ರಧಾನಿ ಒತ್ತಿ ಹೇಳಿದರು. ಇದರಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಮನೆಗಳ ಪುನರ್ನಿರ್ಮಾಣ, ರಾಷ್ಟ್ರೀಯ ಹೆದ್ದಾರಿಗಳ ಪುನಃಸ್ಥಾಪನೆ, ಶಾಲೆಗಳ ಪುನರ್ನಿರ್ಮಾಣ, ಪಿಎಂಎನ್‌ಆರ್‌ಎಫ್ ಮೂಲಕ ಪರಿಹಾರ ಒದಗಿಸುವುದು ಮತ್ತು ಜಾನುವಾರುಗಳಿಗೆ ಮಿನಿ ಕಿಟ್‌ಗಳನ್ನು ವಿತರಿಸುವುದು ಮುಂತಾದ ಕ್ರಮಗಳು ಸೇರಿವೆ. ಪ್ರಧಾನಿ ಅವರು ಮೃತರ ಕುಟುಂಬಸ್ಥರಿಗೆ ೨ ಲಕ್ಷ ರೂಪಾಯಿಗಳ ಪರಿಹಾರ ಮತ್ತು ಪ್ರವಾಹ ಹಾಗೂ ಸಂಬಂಧಿತ ವಿಪತ್ತುಗಳಲ್ಲಿ ಗಂಭೀರವಾಗಿ ಗಾಯಗೊಂಡವರಿಗೆ ೫೦ ಸಾವಿರ ರೂಪಾಯಿಗಳ ಪರಿಹಾರವನ್ನು ಘೋಷಿಸಿದ್ದಾರೆ. ಇತ್ತೀಚಿನ ಪ್ರವಾಹ ಮತ್ತು ಭೂಕುಸಿತಗಳಿಂದ ಅನಾಥರಾದ ಮಕ್ಕಳಿಗೆ ಪಿಎಂ ಕೇರ್ಸ್ ಫಾರ್ ಚಿಲ್ಡ್ರನ್ ಯೋಜನೆಯ ಮೂಲಕ ಸಹಾಯ ದೊರೆಯಲಿದೆ, ಇದು ಅವರ ದೀರ್ಘಕಾಲೀನ ಆರೈಕೆ ಮತ್ತು ಕಲ್ಯಾಣವನ್ನು ಖಚಿತಪಡಿಸುತ್ತದೆ ಎಂದು ಪ್ರಧಾನಿ ಹೇಳಿದ್ದಾರೆ.

>><><><><><><<

ಉತ್ತರ ಪ್ರದೇಶದ ಕಾಶಿ ನಗರದ ಸಾಂಸ್ಕೃತಿಕ ಮಹತ್ವ ಮತ್ತು ಭಾರತ ಹಾಗೂ ಮಾರಿ?ಸ್ ನಡುವಿನ ಬಲವಾದ ಸಾಂಸ್ಕೃತಿಕ ಸಂಪರ್ಕವನ್ನು ಪರಿಗಣಿಸಿ ಮಾರಿ?ಸ್ ಪ್ರಧಾನಿ ಡಾ. ನವೀನ್ ಚಂದ್ರ ರಾಮಗೂಲಂ ಅವರ ಭೇಟಿ ಇನ್ನ? ವಿಶೇ?ವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ದ್ವಿಪಕ್ಷೀಯ ಸಹಕಾರದ ಎಲ್ಲಾ

ಅಂಶಗಳನ್ನು ಡಾ.ರಾಮಗೋಲಂ ಪರಿಶೀಲಿಸಿದ್ದಾರೆ ಮತ್ತು ಪ್ರಾದೇಶಿಕ ಹಾಗೂ ಜಾಗತಿಕ ವಿ?ಯಗಳ ಬಗ್ಗೆ ಚರ್ಚಿಸಿದ್ದಾರೆ ಎಂದು ಹೇಳಿದ್ದಾರೆ. ಮೂಲಸೌಕರ್ಯ, ಆರೋಗ್ಯ ರಕ್ಷಣೆ, ಡಿಜಿಟಲ್ ತಂತ್ರಜ್ಞಾನ, ಇಂಧನ, ಕಡಲ ಭದ್ರತೆ ಮತ್ತು ಇನ್ನೂ ಹೆಚ್ಚಿನವುಗಳಲ್ಲಿ ಸಹಕಾರವನ್ನು ಬಲಪಡಿಸಲು ಅವರ ಒಮ್ಮತವಿದೆ ಎಂದು ಪ್ರಧಾನಿ ಹೇಳಿದ್ದಾರೆ.

>><><><><><><<

ಭಾರತ ಚುನಾವಣಾ ಆಯೋಗವು ಇಂದು ದೇಶದ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಗಳ ಮಾಧ್ಯಮ ಮತ್ತು ಸಂವಹನ ಅಧಿಕಾರಿಗಳಿಗಾಗಿ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಿದೆ. ಭಾರತದಲ್ಲಿ ಚುನಾವಣೆಗಳು ಸಂವಿಧಾನದ ಪ್ರಕಾರ ನಡೆಯುತ್ತವೆ ಎಂಬುದನ್ನು ಪುನರುಚ್ಚರಿಸುತ್ತಾ, ಕಾನೂನುಬದ್ಧ, ನಿಖರ ಮತ್ತು ನಿಯಮಾಧಾರಿತ ಮಾಹಿತಿಯನ್ನು ಸಮಯೋಚಿತ ಹಾಗೂ ಸಂಯೋಜಿತ ರೀತಿಯಲ್ಲಿ ಸಾರ್ವಜನಿಕರಿಗೆ ತಲುಪಿಸುವ ಮಹತ್ವವನ್ನು ಈ ಕಾರ್ಯಾಗಾರ ಒತ್ತಿ ಹೇಳಲಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಚುನಾವಣಾ ಆಯುಕ್ತರಾದ ಡಾ. ಸುಖಬೀರ ಸಿಂಗ್ ಸಂಧು ಮತ್ತು ಡಾ. ವಿವೇಕ್ ಜೋಶಿ ಅವರ ಉಪಸ್ಥಿತಿಯಲ್ಲಿ ಕಾರ್ಯಾಗಾರವನ್ನು ಉದ್ಘಾಟಿಸಲಿದ್ದಾರೆ. ಇತ್ತೀಚೆಗೆ ಚುನಾವಣಾ ಪ್ರಕ್ರಿಯೆಗಳ ಕುರಿತು ತಪ್ಪುಮಾಹಿತಿಯ ಪ್ರಮಾಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಗಳ ಸಂವಹನ ವ್ಯವಸ್ಥೆಯನ್ನು ಬಲಪಡಿಸಿ, ತಪ್ಪು ಮಾಹಿತಿಗೆ ನಿಖರವಾದ ಪ್ರತಿಕ್ರಿಯೆ ನೀಡಲು ಈ ಕಾರ್ಯಾಗಾರ ಉದ್ದೇಶಿಸಲಾಗಿದೆ.

>><><><><><><<

ಹನ್ನೆರಡು ದಿನಗಳ ಅಖಿಲ ಭಾರತ ಥಾಲ್ ಸೈನಿಕ್ ಶಿಬಿರ-೨೦೨೫ ನವದೆಹಲಿಯಲ್ಲಿ ನಿನ್ನೆ ಸಂಪನ್ನಗೊಂಡಿತು. ದೇಶಾದ್ಯಂತ ೧೭ ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್-ಎನ್‌ಸಿಸಿ ನಿರ್ದೇಶನಾಲಯಗಳನ್ನು ಪ್ರತಿನಿಧಿಸುವ ೧ ಸಾವಿರದ ೫೦೦ಕ್ಕೂ ಹೆಚ್ಚು ಕೆಡೆಟ್‌ಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಶಿಬಿರದಲ್ಲಿ ಗುಂಡು ಹಾರಿಸುವುದು, ನಕ್ಷೆ ಓದುವುದು, ದೂರ ಮತ್ತು ಕ್ಷೇತ್ರ ಸಂಕೇತವನ್ನು ನಿರ್ಣಯಿಸುವುದು ಹಾಗೂ ಕೆಡೆಟ್‌ಗಳ ದೈಹಿಕ

ಮತ್ತು ಮಾನಸಿಕ ಸಾಮರ್ಥ್ಯಗಳನ್ನು ಹೆಚ್ಚಿಸುವ ಆರೋಗ್ಯ ಮತ್ತು ನೈರ್ಮಲ್ಯ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಿತು.

>><><><><><><><<

ಭಾರತ, ಜಾಗತಿಕವಾಗಿ ಅಮೆರಿಕ ಹೊಂದಿರುವ ಅತ್ಯಂತ ಪ್ರಮುಖ ಸಂಬಂಧಗಳಲ್ಲಿ ಒಂದು ಎಂದು ಭಾರತಕ್ಕೆ ಅಮೆರಿಕದ ರಾಯಭಾರಿಯಾಗಿ ನಾಮನಿರ್ದೇಶಿತರಾಗಿರುವ ಸರ್ಗಿಯೋ ಗಾರ್ ಹೇಳಿದ್ದಾರೆ. ಅಮೆರಿಕಾ ಸೆನೆಟ್ ಎದುರಿನ ದೃಢೀಕರಣ ವಿಚಾರಣೆ ವೇಳೆ ಮಾತನಾಡಿದ ಅವರು, ಭಾರತ ಕಾರ್ಯತಂತ್ರದ ಪಾಲುದಾರ ರಾಷ್ಟ್ರವಾಗಿದ್ದು, ಅದರ ಬೆಳವಣಿಗೆಯ ದಿಕ್ಕು, ಈ ಪ್ರದೇಶದ ಮೇಲೆ ಹಾಗೂ ಅದನ್ನು ಮೀರಿ ಪರಿಣಾಮ ಬೀರಲಿದೆ. ಭಾರತದ ಭೌಗೋಳಿಕ ಸ್ಥಾನಮಾನ, ಆರ್ಥಿಕ ಬೆಳವಣಿಗೆ ಹಾಗೂ ಸೇನಾ ಸಾಮರ್ಥ್ಯಗಳನ್ನು ಉಲ್ಲೇಖಿಸಿದ ಗಾರ್, ಭಾರತ ಪ್ರಾದೇಶಿಕ ಸ್ಥಿರತೆಗಾಗಿ ಮುಖ್ಯ ಆಧಾರವಾಗಿದ್ದು, ಉಭಯ ರಾಷ್ಟ್ರಗಳ ಭದ್ರತಾ ಮತ್ತು ಸಮೃದ್ಧಿಯ ಹಿತಾಸಕ್ತಿಗಳನ್ನು ಮುಂದುವರಿಸಲು ನಿರ್ಣಾಯಕವಾಗಿದೆ ಎಂದರು. ರಕ್ಷಣಾ ಮತ್ತು ಭದ್ರತಾ ಸಹಕಾರವನ್ನು ಬಲಪಡಿಸುವುದು ಅವರ ಮೊದಲ ಆದ್ಯತೆಯಾಗಿರಲಿದೆ. ಇದರಲ್ಲಿ ಜಂಟಿ ಸೇನಾ ಸಮರಾಭ್ಯಾಸಗಳನ್ನು ವಿಸ್ತರಿಸುವುದು, ರಕ್ಷಣಾ ತಂತ್ರಜ್ಞಾನಗಳ ಸಹ-ಅಭಿವೃದ್ಧಿ ಹಾಗೂ ಸಹ-ಉತ್ಪಾದನೆಗೆ ಮುಂದಾಗುವುದು ಮತ್ತು ಪ್ರಮುಖ ರಕ್ಷಣಾ ವಸ್ತುಗಳ ಮಾರಾಟದ ಒಪ್ಪಂದಗಳನ್ನು ಅಂತಿಮಗೊಳಿಸುವುದು ಸೇರಿವೆ ಎಂದು ಗಾರ್ ಹೇಳಿದರು ೧.೪ ಶತಕೋಟಿ ಜನಸಂಖ್ಯೆ ಮತ್ತು ವೇಗವಾಗಿ ಬೆಳೆಯುತ್ತಿರುವ ಮಧ್ಯಮ ವರ್ಗ ಭಾರತವನ್ನು ಕೃತಕ ಬುದ್ಧಿಮತ್ತೆ, ಫಾರ್ಮಾಸ್ಯೂಟಿಕಲ್ಸ್, ಹಾಗೂ ನಿರ್ಣಾಯಕ ಖನಿಜಗಳ ಕ್ಷೇತ್ರಗಳಲ್ಲಿ ಅಮೆರಿಕಕ್ಕೆ ಭಾರಿ ಅವಕಾಶಗಳನ್ನು ನೀಡುತ್ತದೆ ಎಂದರು. ಮುಂದಿನ ವಾರ ಭಾರತದ ನಿಯೋಗವನ್ನು ವಾಷಿಂಗ್ಟನ್‌ಗೆ ಆಹ್ವಾನಿಸಲಾಗಿದೆ ಮತ್ತು ಉಭಯ ರಾಷ್ಟ್ರಗಳು ಪ್ರಮುಖ ಒಪ್ಪಂದದ ಅಂತಿಮ ಹಂತದಲ್ಲಿವೆ ಎಂದು ಮಾಹಿತಿನೀಡಿದರು.

ಧ್ವನಿ: ಸರ್ಗಿಯೋ ಗಾರ್ ೨೦ ಸೆಕೆಂಡ್

ಈ ಮಧ್ಯೆ, ಅಮೆರಿಕದಲ್ಲಿ ಇsರತದ ರಾಯಭಾರಿ ವಿನಯ್ ಕ್ವಾತ್ರಾ ಅವರು ಗಾರ್ ಅವರ ನಾಮನಿರ್ದೇಶನವನ್ನು ಸ್ವಾಗತಿಸಿದ್ದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಪ್ತರಲ್ಲಿ ಒಬ್ಬರಾದ ಗಾರ್ ಅವರನ್ನು ಭಾರತಕ್ಕೆ ರಾಯಭಾರಿಯಾಗಿ ನೇಮಿಸಿರುವುದು ಉಭಯ ರಾಷ್ಟ್ರಗಳ ಬಲಿಷ್ಠ ಸಂಬಂಧದ ಸಂಕೇತವಾಗಿದೆ ಎಂದು ಹೇಳಿದರು.

>><><><><><><<